ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 140/2015**

**ಪ್ರಾಸಾ-34 ಚಾಸಾ- 1**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ನರಸಿಂಹಮೂರ್ತಿ |
| ತಂದೆಯ ಹೆಸರುಃ | : | ನರಸಪ್ಪ |
| ವಯಸ್ಸುಃ | : | 46 ವರ್ಷ |
| ಉದ್ಯೋಗಃ | : | ತಹಶೀಲ್ದಾರ್ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 20-09-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಡಿಸೆಂಬರ್ 2012ರಿಂದ ಸೆಪ್ಟೆಂಬರ್ 2015ರವರೆಗೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ ಹಾಸನದಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 22-7-13ರಂದು ಹಾಸನ ಲೋಕಾಯುಕ್ತ ಪೊಲೀಸ್ ಅಧೀಕ್ಷಕರವರಿಗೆ ಸಿಆರ್ ಮಂಜುನಾಥ್ ಬಿನ್ ಲೇಟ್ ಸಣ್ಣ ರಾಮಯ್ಯ ಕಛೇರಿ ಅಧೀಕ್ಷಕರು ಶ್ರೀಚಾಮರಾಜೇಂದ್ರ ಸರ್ಕಾರಿ ಆಸಪತ್ರೆ ಹಾಸನ ಇವರು ನಿಗಧಿತ ಆದಾಯಕ್ಕಿಂತ ಜಾಸ್ತಿ ಆಸ್ತಿ ಬೆಳೆಸಿದ್ದಾರೆಂಬ ಮಾಹಿತಿಯ ಬಗ್ಗೆ ಗುಪ್ತ ಮಾಹಿತಿಯನ್ನು ಸಂಗ್ರಹಿಸಿ ಸೋರ್ಸ್ ವರದಿಯನ್ನು ಈಗಾಗಲೇ ಗುರುತಿಸಲ್ಪಟ್ಟಿರುವ **ನಿಪಿ-162ರಂತೆ** ಸಲ್ಲಿಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-162(ಎ) ಎಂದು ಗುರುತಿಸಲಾಯಿತು.

3.ಆರೋಪಿತರು ಹಾಸನ ಹೋಬಳಿ ಚಿಕ್ಕಕಡಲೂರು ಗ್ರಾಮದ ಸಣ್ಣರಮಯ್ಯ ಮತ್ತು ಲಕ್ಷ್ಮಮ್ಮ ರವರ ಮಗನಾಗಿದ್ದು ಇವರಿಗೆ ವಿಜಯಲಕ್ಷ್ಮಿ ಎಂಬ ಸಹೋದರಿ ಇದ್ದು ಇವರ ತಂದೆ ಸಣ್ಣರಾಮಯ್ಯ ಆರೋಗ್ಯ ಇಲಾಖೆಯಲ್ಲಿ ಚಾಲಕರಾಗಿದ್ದು ಅಕಾಲಿಕ ಮರಣಹೊಂದಿದ ಕಾರಣ ಅನುಕಂಪದ ಆಧಾರದ

ಮೇಲೆ 1976ರಲ್ಲಿ ನೌಕರಿ ಸಿಕ್ಕಿರುತ್ತದೆ. 2011ರಲ್ಲಿ ಅಧೀಕ್ಷಕರಾಗಿ ಬಡ್ತಿ ಹೊಂದಿರುತ್ತಾರೆ. ಸದರಿಯವರು ಪದ್ಮಾವತಿಯವರನ್ನು ಮದುವೆಯಾಗಿದ್ದು ಅವರಿಗೆ ಒಬ್ಬ ಗಂಡು ಮಗ ಮತ್ತು ಒಬ್ಬ ಹೆಣ್ಣುಮಗಳು ಇದ್ದು ಮಗ ಬಿಕಾಂ ಓದಿ ಎಲ್ ಐ ಸಿ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದು, ಮಗಳು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದರು. ಆರೋಪಿತರ ಚೆಕ್ ಅವಧಿಯಲ್ಲಿ ಆರೋಪಿತರು ಗಳಿಸಿರುವ ಆಸ್ತಿ ವಿವರವನ್ನು ಸೋರ್ಸ್ ವರದಿಯಲ್ಲಿ ಕಾಣಿಸಿದ್ದು ಅವುಗಳ ಮೌಲ್ಯ ಅಂದಾಜು 38,04,913 ಆಗಿರುತ್ತದೆ. ಚೆಕ್ ಅವಧಿಯಲ್ಲಿ ಅವರ ಕುಟುಂಬದ ಖರ್ಚು ವೆಚ್ಚ ಅಂದಾಜು 10,00,000ಆಗಿರುತ್ತದೆ. ಆ ಅವಧಿಯಲ್ಲಿ ಅವರ ನಿಗಧಿತ ಆದಾಯ 21ಲಕ್ಷ ಆಗಿರುತ್ತದೆ. ಆರೋಪಿತರು ಶೇಕಡ 128.80ರಷ್ಟು ಹೆಚ್ಚಿನ ಆಸ್ತಿಯನ್ನು ಅಕ್ರಮವಾಗಿ ಗಳಿಸಿರುತ್ತಾರೆಂಬುದು ಕಂಡುಬಂದಿರುತ್ತದೆ. ಅವರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲು ಲಿಖಿತವಾಗಿ ಅನುಮತಿಯನ್ನು ಕೇಳಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

(ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ ಕಾರಣ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**